

# ಅಜ್ಜಿಯ ಜಾಣ್ಮೆ

ಒಂದೂರಿನಲ್ಲಿ ಪಾತಜ್ಜಿ ಎನ್ನುವ ಮುದುಕಿಯೊಬ್ಬಳಿದ್ದಳು. ಅವಳಿಗೆ ಗಂಡ, ಮಕ್ಕಳು ಯಾರೂ ಇಲ್ಲ. ಆಕೆ ಒಬ್ಬಂಟಿ. ತನ್ನ ಜೀವನೋಪಾಯಕ್ಕೆ ಊರಿನ ಜಮೀನುದಾರರೊಬ್ಬರ ಮನೆಯಲ್ಲಿ ದುಡಿಯುತ್ತಿದ್ದಳು. ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋದರೆ ಅಲ್ಲಿ ಜಮೀನುದಾರರ ಮನೆಯಲ್ಲಿ ಬೆಳಗಿನ ಉಪಾಹಾರವಾಗುತ್ತಿತ್ತು. ಮಧ್ಯಾಹ್ನದ ಊಟ ಅಲ್ಲೇ ಸಿಗುತ್ತಿತ್ತು. ಸಂಜೆ ಮನೆಗೆ ಬರುವಾಗ ಒಬ್ಬಂಟಿ ವೃದ್ಧೆಯೆಂದು ಯಜಮಾನಿ ಮಧ್ಯಾಹ್ನ ಉಳಿದ ಅನ್ನ, ಪದಾರ್ಥ ಕೊಡುತ್ತಿದ್ದರು. ಅದರಿಂದಾಗಿ ಆಕೆ ತನ್ನ ಮನೆಯಲ್ಲಿ ಅಡುಗೆ ಮಾಡುವ ಗೋಜಿಗೆ ಹೋಗುತ್ತಿರಲಿಲ್ಲ.

ಪಾತಜ್ಜಿಗೆ ನಿತ್ಯ ಜಮೀನುದಾರರ ಮನೆಯ ಹಸು, ಕರುಗಳಿಗೆ ಹುಲ್ಲು ಕತ್ತರಿಸಿ ಮೇವು ಹಾಕುವ ಕೆಲಸ. ಹಗುರವಾದ ಕೆಲಸ ಆದ ಕಾರಣ ಅವಳಿಗೆ ಹೆಚ್ಚಿಗೆ ಸುಸ್ತು ಆಗುತ್ತಿರಲಿಲ್ಲ. ಅವಳಿಗೆ ಇದ್ದ ಒಂದೇ ಒಂದು ಅಭ್ಯಾಸವೆಂದರೆ ಆಗಾಗ ವೀಳ್ಯ ತಿನ್ನಬೇಕು. ಅದಿಲ್ಲವಾದರೆ ಅವಳಿಗೆ ಆಗದು, ಹೊತ್ತು ಹೋಗದು.

ಹೀಗೊಂದು ದಿನ ಅಜ್ಜಿ ಕೆಲಸ ಮುಗಿಸಿ ಮನೆಗೆ ಬಂದಳು. ಮಳೆಗಾಲದ ದಿನ. ಆಕೆಗೆ ಚಳಿ ಹಿಡಿದಿತ್ತು. ಒಣ ಕಟ್ಟಿಗೆ ತುಂಡು ಒಲೆಗೆ ಹಾಕಿ ಉರಿಸಿ ಚಳಿ ಕಾಯಿಸಿದಳು. ಹೊರಗೆ ಮಳೆ ಸುರಿಯುತ್ತಿತ್ತು. ಅಜ್ಜಿ ಚಳಿಗೆ ಅನ್ನ ಬಿಸಿ ಮಾಡಿ ಗೊಜ್ಜು ಹಾಕಿ ಉಂಡಳು. ಆಮೇಲೆ ಹೊರಗಿನ ಚಾವಡಿಯಲ್ಲಿ ಕೂತು ವೀಳ್ಯ ತೆಗೆದು ಕುಟ್ಟಾಣಿಯಲ್ಲಿ ಹಾಕಿ ಕುಟ್ಟತೊಡಗಿದಳು. ಪಾತಜ್ಜಿಯ ಮುದ್ದಿನ ಬೆಕ್ಕು ಚಳಿ ತಡೆಯದೆ ಅವಳ ಹಾಸಿಗೆಯಲ್ಲಿ ನುಗ್ಗಿ ಮಲಗಲು ಹವಣಿಸುತ್ತಿತ್ತು. ಅಜ್ಜಿಗೆ ಬೆಕ್ಕಿನ ಪರದಾಟ ಕಂಡು ನಗು ಬಂತು.

'ಅಲ್ಯಾಕೇ ಮರೆಯಾಗ್ತಿದಿ. ಬಾ ಇಲ್ಲಿ. ವೀಳ್ಯ ಹಾಕ್ಕೊಳ್ಳೋಣ' ಎಂದು ಕರೆದಳು ಅಜ್ಜಿ. ಅದೇ ಹೊತ್ತಿಗೆ ಊರಿನ ಪುಡಿ ಕಳ್ಳನೊಬ್ಬ ಅಜ್ಜಿಯ ಮನೆಯಲ್ಲಿ ಕಳ್ಳತನಕ್ಕೆ ಹೊಂಚು ಹಾಕಿ ಹಿಂದಿನ ಬಾಗಿಲ ಬಳಿ ಅಡಗಿ ನಿಂತಿದ್ದ. ಗಲಗಲನೆ ನಕ್ಕ ಅಜ್ಜಿ ತನ್ನನ್ನು ಕಂಡೇ ಹಾಗೆ ಕರೆದಳು ಎಂದುಕೊಂಡು ಕಳ್ಳನಿಗೆ ಹೆದರಿಕೆ ಆಯಿತು. ಅವನು ನಾಲ್ಕು ಹೆಜ್ಜೆ ಹಿಂದೆ ಸರಿದು ಮರೆಯಾದ. ಅದೇ ಸಮಯಕ್ಕೆ ಬೆಕ್ಕು ಹಾತೆಯೊಂದನ್ನು (ಪತಂಗ) ಕಂಡು ಅಟ್ಟಿಸಿತು.

'ಯಾಕಪ್ಪಾ, ಹಾಗ್ಯಾಕೆ ಓಡುತ್ತಿ. ಮೆಲ್ಲ ಮೆಲ್ಲಗೆ ಹೋಗಬಾರದೇ? ಮಳೆಗೆ ಬಿದ್ದುಬಿಟ್ಟರೆ ಯಾರಿದ್ದಾರೆ ನಿನಗೆ?' ಎಂದಳು ಅಜ್ಜಿ. ಕಳ್ಳ ಬೆಚ್ಚಿಬಿದ್ದ. ನಿಜಕ್ಕೂ ಅವನದು ಒಂಟಿ ಜೀವ. ತಾಯ್ತಂದೆ ಇರಲಿಲ್ಲ. ಮದುವೆಗೆ ಯಾರೂ ಹೆಣ್ಣು ಕೊಟ್ಟವರಿಲ್ಲ. ಅಯ್ಯಯ್ಯೋ ಈ ಚಾಣಾಕ್ಷೆ ಅಜ್ಜಿಗೆ ಕಾಣಿಸಿಕೊಳ್ಳಬಾರದೆಂದು ಕತ್ತಲಿಗೆ ಸರಿದರೂ ಕಂಡೇ ಬಿಟ್ಟಳು ಎಂದುಕೊಂಡು ಕಳ್ಳ ಹೆದರಿದನು.

'ಬಾ ಇಲ್ಲಿ. ಸ್ವಲ್ಪ ಕಷ್ಟ, ಸುಖ ಮಾತಾಡೋಣಂತೆ. ಒಳಕ್ಕೆ ಬಾ. ಕೂತುಕೋ ಇಲ್ಲಿ. ಚಳಿಗೆ ಅಗ್ಗಿಷ್ಟಿಕೆ ಉಂಟು ನೋಡು' ಎಂದಳು ನಗುತ್ತ. ದಿನಾಲೂ ಕೆಲಸದಿಂದ ಬಂದು ವಿರಾಮವಾಗಿ ಕೂತಾಗ ಅಜ್ಜಿ ಬೆಕ್ಕನ್ನು ಮಡಿಲಿಗೆ ಕೂರಿಸಿ ಅದರ ತಲೆ ಸವರುತ್ತ ಮುದ್ದು ಮಾಡುತ್ತಾ ಮಾತಾಡುವುದು ಇದ್ದಿದ್ದೇ. ಹಾಗೆ ಮುದ್ದಿಸಿದಾಗ ಅವಳಿಗೆ ಸಂತೋಷವಾಗುತ್ತಿತ್ತು. ಕೀಟವನ್ನು ಹಿಡಿಯುವುದರಲ್ಲಿದ್ದ ಬೆಕ್ಕಿಗೆ ಅಜ್ಜಿಯ ಬಳಿ ಕೂತರೆ ಕೀಟ ಸಿಕ್ಕುತ್ತಾ? ಅದು ಅದರ ಹಿಂದೆ ಓಡುತ್ತಲಿತ್ತು.

ವೀಳ್ಯ ಬಾಯಿಗೆಸೆಯುತ್ತ ಅಜ್ಜಿ 'ಬರದಿದ್ದರೆ ಬಿಡು, ನಿನಗೆ ವೀಳ್ಯವಿಲ್ಲ. ನಾಳೆ ಹತ್ತಿರ ಬಂದು ಕೇಳು. ಆಗ ನಿನ್ನನ್ನು ನೋಡಿಕೊಳ್ಳುತ್ತೇನೆ. ಈಗ ಸಾಕು ಅಲ್ಲಿ ಅಡಗಿದ್ದು. ಬರದೆ ಎಲ್ಲಿ ಹೋಗುತ್ತಿ ನೋಡುತ್ತೇನೆ. ನಾಳೆ ಯಜಮಾನಿಗೆ ದೂರು ಕೊಡದೆ ಇದ್ದರೆ ನನ್ನ ಹೆಸರು ಪಾತಜ್ಜಿ ಅಲ್ಲ' ಎಂದು ನಕ್ಕಳು ಕಿಲಕಿಲನೆ.

ಆ ಬೆಕ್ಕು ಯಜಮಾನಿಯ ಮನೆಯದು. ಒಂಟಿ ಅಜ್ಜಿಗೆ ಸಂಗಾತಕ್ಕಿರಲಿ ಎಂದು ಅವರೇ ಮರಿ ಇದ್ದಾಗಲೆ ಕೊಟ್ಟಿದ್ದರು. ಬೆಕ್ಕು ಹಟ ಮಾಡಿದಾಗ, ವಿಪರೀತ ತುಂಟತನ ಮಾಡಿದರೆ ಅಜ್ಜಿ ಅದನ್ನು ಯಜಮಾನಿಗೆ ಹೇಳುತ್ತೇನೆ ಎಂದು ಹೆದರಿಸುವುದು ವಾಡಿಕೆ. ಅದು ಗಂಡು ಬೆಕ್ಕು. ಅದಕ್ಕೆ ಅಬ್ಬರ ಜಾಸ್ತಿ. ಮನೆಯಲ್ಲಿನ ಮಡಿಕೆ, ಕುಡಿಕೆ, ಪಾತ್ರೆಗಳನ್ನು ಮೊಗಚಿ ಹಾಕಿ ಉರುಳಾಡಿಸುವ ತಂಟೆ ಹೆಚ್ಚು. ಬೆಕ್ಕು ಹಾರುವ ರಭಸಕ್ಕೆ ಅಜ್ಜಿ ಮುಚ್ಚಿಟ್ಟ ಅನ್ನ ಚೆಲ್ಲಾಪಿಲ್ಲಿಯಾಗಿ ಹರಡಿತು. ಈಗ ಪಾತಜ್ಜಿಗೆ ನಿಜವಾಗಿ ಸಿಟ್ಟು ಬಂತು.

'ಅಯ್ಯೋ , ಏನೋ ಸುಬ್ಬಾ, ಇದು. ನಿಂಗ್ಯಾಕೆ ಬಂತು ಈ ದುರ್ಬುದ್ಧಿ! ನಾಳೆ ಯಜಮಾನರ ಬಳಿ ಹೇಳುತ್ತೇನೆ ಹೀಗೆಲ್ಲ ಪುಂಡಾಟಿಕೆ ಮಾಡಿದರೆ. ಈಗೇನು ಬರುತ್ತೀಯಾ ಇಲ್ಲ, ಯಜಮಾನ್ರನ್ನೇ ಕರೆಸಬೇಕಾಗುತ್ತಾ?' ಎಂದು ಪಾತಜ್ಜಿ ಗದರಿದಳು ಜೋರಾಗಿ.

ಹೊರಗೆ ನಿಂತು ಕಿಟಿಕಿಯ ಸಂದಿನಲ್ಲಿ ಇಣುಕಿ ಹಾಕುತ್ತ, ಹೊಂಚು ಹಾಕುತ್ತಿದ್ದ ಕಳ್ಳ ಜಮೀನುದಾರರ ಮನೆಯ ಕೆಲಸಗಾರ. ಅವನ ಹೆಸರು